ಫೇರ್‌ಸ್ಟೇಜ್ ಮಾಡಿದರೂ ಸಹ ಬೆಂಗಳೂರಿನಿಂದ ಮುಲ್ಕಿಗೆ ಟಿಕೆಟ್ ಕೇಳಿದರೆ ಮುಲ್ಕಿಗೆ ಟಿಕೆಟ್ ಕೊಡುವುದಿಲ್ಲ. ಪತಕ್ಕೆಂದರೆ ಉಡುಪಿಗೆ ಹೋಗುವಂಥ ಬಸ್‌ಗಳು. ಅವುಗಳಲ್ಲಿ ಟಿಕೆಟ್ ಕೊಡುವುದಿಲ್ಲ. ಈ ರೀತಿ ಆಗುತ್ತಿರುವುದರಿಂದ ಮುಲ್ಕಿಯಿಂದಲೇ ಟಿಕೆಟ್ ಕೊಡುವಂಥ ಒಂದು ಸವಲತ್ತು ಸಿಕ್ಕಿದರೆ ಬೆಳೆಯುತ್ತಿರುವಂಥ ಮುಲ್ಕಿ ಪಟ್ಟಣಕ್ಕೆ ಅನುಕೂಲವಾಗುತ್ತದೆ. ಈಗಾಗಲೇ ಕೊಂಕಣ ರೈಲ್ವೆ ನಿಲ್ದಾಣವನ್ನೂ ಸಹ ಮಾಡಿದ್ದಾರೆ. ನಮ್ಮ ರಾಜ್ಯದ ನೂರಾರು ಬಸ್‌ಗಳು ಆ ಹೆದ್ದಾರಿಯಲ್ಲಿ ಹೋಗುತ್ತಿವೆ. ಮುಲ್ಕಿ ಎಂಬುದು ನಮ್ಮ ಮೂಡಬಿದರೆಗೂ 30 ಕಿಲೋಮೀಟರ್, ಮಂಗಳೂರಿಗೂ ಮೂವತ್ತು ಕಿಲೋಮಿಟರ್ ಉಡುಪಿಗೂ 30 ಕಿಲೋಮೀಟರ್ ಮಧ್ಯೆ ಎಲ್ಲಾ ಎಕ್ಸಪ್ರೆಸ್ ಬಸ್‌ಗಳು ನಿಲ್ಲುತ್ತಿವೆ. ಆದರೆ ನಮ್ಮ ಸರ್ಕಾರಿ ಬಸ್ಸ್‌ಗಳಿಗೆ ಅಲ್ಲಿ ಟಿಕೆಟ್ ಕೊಡುವಂಥ ಸೌಲಭ್ಯ ಇಲ್ಲದ ಕಾರಣಕ್ಕಾಗಿ ಯಾವ ಬಸ್‌ಗಳೂ ಅಲ್ಲಿ ನಿಲ್ಲುವುದಿಲ್ಲ. ಆದ್ದರಿಂದ ಫೇರ್‌ಸ್ಟೇಜ್ ಮಾಡಿದ್ದೇವೆಂದು ಹೇಳಿದರೂ ಅಲ್ಲಿ ಬಸ್ ನಿಲ್ಲುವಂತೆ ತಾವು ಕಡ್ಡಾಯವಾಗಿ ನಿರ್ದೇಶನ ಕೊಡಬೇಕು. ಮುಖ್ಯವಾಗಿ ಪತ್ರಿಕೆಯಲ್ಲಿ ಪ್ರಕಟಪಡಿಸಿದರೆ ಮಾತ್ರ ಅದು ಅನುಷ್ಠಾನಕ್ಕೆ ಬರುತ್ತದೆ. ಇಲ್ಲದಿದ್ದರೆ ಯಾರಿಗೂ ಗೊತ್ತಾಗುವುದಿಲ್ಲ. ಆದ್ದರಿಂದ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳುವುದು ಅಲ್ಲಿಗೆ ಬಸ್‌ಸ್ಟಾಂಡ್ ಬೇಕು ಎನ್ನುವುದು ಒಂದೇ ಒಂದು ಉದ್ದೇಶ. ಇದರ ಮೇಲೆ ಎರಡು ಸಾರಿ ಕ್ವೊಶ್ಚನ್ ಬಂದಿತ್ತು. ಎರಡು ಸಾರಿ ಉತ್ತರ ಕೊಟ್ಟಿದ್ದೇನೆ. ಅಲ್ಲಿ ಏನೆಂದರೆ ಇದು ಫೀಸಬಲ್ ಆಗುವುದಿಲ್ಲ. 20–25 ಕಿಲೋಮೀಟರ್ ಒಳಗೆ ಬೇರೆ ಸ್ಥಳದಲ್ಲಿ ಇದೆ. ಅಲ್ಲಿ ಎಕ್ಸ್‌ಪ್ರೆಸ್ ನಿಲ್ಲುತ್ತಿದೆ. ಅಲ್ಲದೆ ಲಕ್ಷುರಿ, ಸೆಮಿಲಕ್ಷುರಿ ಅವುಗಳಿಗೆ ಫೇರ್‌ಸ್ಟೇಜ್ ಫಿಕ್ಸ್ ಆಗಿದೆ. ಆ ಸ್ಟೇಜ್‌ನಲ್ಲಿ ಈಗ ಎಕ್ಸ್‌ಪ್ರೆಸ್ ಇದೆ. ಎರಡು ರೂಪಾಯಿ ಮಿನಿಮಮ್ ಎಂದಿದೆ. ಹಾಗೆಯೇ ಮಂಗಳೂರು ಮುಲ್ಕಿ 5 ರೂಪಾಯಿಗಳು ಸೆಮಿಲಕ್ಷುರಿಗೆ; 8 ರೂಪಾಯಿಗಳು ಲಕ್ಷುರಿಗೆ, ಈ ಪ್ರಕಾರವಾಗಿ ಕೊಡುತ್ತಿದ್ದೇವೆ ಮತ್ತು ಅಲ್ಲಿ ನಿಲ್ಲಿಸುತ್ತಿದ್ದೇವೆ. ನಿಮಗೆ ಬೇಕಾಗಿರುವುದು ಬಸ್‌ಸ್ಟಾಂಡ್; ಆ ಬಸ್‌ಸ್ಟಾಂಡ್ ಫೀಸಬೆಲೆಟಿ ಇಲ್ಲದ ಕಾರಣ ನಮಗೆ ಬಹಳ ತೊಂದರೆಯಾಗಿದೆ.

ಶ್ರೀ ಕೆ. ಸೋಮಪ್ಪ ಸುವರ್ಣ:– ಅಲ್ಲಿ ಧರ್ಮಾರ್ಥವಾಗಿ ಒಂದು ಕೊಠಡಿಯನ್ನು ಕೊಡುತ್ತೇವೆಂದು ಹೇಳಿದ್ದಾರೆ. ನಿಮಗೆ ಯಾವ ಖರ್ಚೂ ಇಲ್ಲ. ಅಲ್ಲಿ ಟಿಕೆಟ್ ಇಷ್ಯೂ ಮಾಡುವಂಥ ಸವಲತ್ತುಗಳನ್ನು ಒದಗಿಸಿಕೊಡಬೇಕು. ಬಸ್‌ಸ್ಟಾಂಡ್‌ನ ಆಗತ್ಯವಿದ್ದರೂ ಸಹ ಇರುವ ಬಸ್‌ಸ್ಟಾಂಡ್ನಲ್ಲಿಯೇ ಇರುವ ಬಿಲ್ಡಿಂಗ್‌ನಲ್ಲಿ ಧರ್ಮಾರ್ಥವಾಗಿ ಒಂದು ಕೋಣೆಯನ್ನು ಕೆ.ಎಸ್.ಆರ್.ಟಿ.ಸಿ.ಗೆ ಕೊಡುತ್ತೇವೆಂದು ಹೇಳಿದ್ದಾರೆ. ಅಲ್ಲಿ ಟಿಕೆಟ್ ಇಷ್ಯೂ ಮಾಡುವಂಥ ಒಂದು ಸವಲತ್ತನ್ನು ಕೊಟ್ಟರೆ ಮಾತ್ರ. ನೀವು ಫೇರ್‌ಸ್ಟೇಜ್ ಮಾಡಿದ್ದಕ್ಕೂ ಬಸ್ ನಿಲುಗಡೆ ಮಾಡಿದ್ದಕ್ಕೂ ಅನುಕೂಲವಾಗುತ್ತದೆ. ಅದನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ:– ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆ ಏನಿದೆ ಅದನ್ನು ಪರಿಶೀಲನೆ ಮಾಡಿ ಆ ಪ್ರಕಾರ ವಿಚಾರ ಮಾಡುತ್ತೇನೆ.

ಕನ್ನಡ ಚಲನಚಿತ್ರಗಳಿಗೆ ಸಹಾಯಧನ

384 (1080): ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):–

ಮಾನ್ಯ. ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಇದುವರೆಗೆ ಎಷ್ಟು ಕನ್ನಡ ಚಲನಚಿತ್ರಗಳಿಗೆ ಸಹಾಯಧನ ನೀಡಲಾಗಿದೆ. ಹಾಗೂ ಅವುಗಳು ಯಾವುವು;

ಆ. ಹಾಗೆ ಸಹಾಯಧನಕ್ಕಾಗಿ ಕಾದಿರುವ ಚಿತ್ರಗಳೆಷ್ಟು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):-

ಅ. 1031 ಚಿತ್ರಗಳು. ಅವುಗಳಲ್ಲಿ 1986 ಸಹಾಯಧನ ನಿಯಮಾವಳಿಯನ್ವಯ 230 ಚಲನಚಿತ್ರಗಳಿಗೆ ಸಹಾಯಧನ ಮಂಜೂರು ಮಾಡಿದೆ. (ಪಟ್ಟಿ ಲಗತ್ತಿಸಿದೆ)

ಆ. 54 ಚಲನಚಿತ್ರಗಳು.

ದಿನಾಂಕ: 1-1-1986 ರಿಂದ ಜಾರಿಗೆ ಬಂದ ನಿಯಮಾವಳಿಯಂತೆ ಕನ್ನಡ ಮತ್ತು ಇತರೆ ಪ್ರಾದೇಶಿಕ ಭಾಷೆಗಳ ಚಲನಚಿತ್ರಗಳಿಗೆ ಸಹಾಯಧನ ಮಂಜೂರಾತಿ ಮಾಡಿದ ಚಲನಚಿತ್ರಗಳ ಪಟ್ಟಿ.

ಕ್ರಮ ಸಂ.	ಚಲನಚಿತ್ರಗಳ ಹೆಸರು
1.	ಪ್ರೇಮಜಾಲ
2.	ಅರುಣರಾಗ
3.	ಮುಖವಾಡ
4.	ಹೊಸದಿಗಂತ
5.	ಅನಾಮಿಕ
6.	ಹೃದಯ ಪಲ್ಲವಿ
7.	ಹುಲಿ ಹೆಬ್ಬುಲಿ
8.	ಕರುಣಾಮಯಿ
9.	ಯಾರಿಗಾಗಿ
10.	ತಬರನಕಥೆ
11.	ಜೀವನಸಂಗ್ರಾಮ
12.	ಸೂರ್ಯ
13.	ಬಾಳನೌಕೆ
14.	ದಿಗ್ವಿಜಯ
15.	ಅವಳ ಚರಿತ್ರೆ
16.	ಲವ್ ಲೆಟರ್
17.	ಸತ್ವ ಪರೀಕ್ಷೆ
18.	ತಾಯಿಕೊಟ್ಟ ತಾಳಿ
19.	ಪ್ರೇಮತರಂಗ
20.	ವಿಜಯ್
21.	ಅಂತಿಮ ಘಟ್ಟ
22.	ಆಸ್ಫೋಟ
23.	ಅವಳೇ ನನ್ನ ಹೆಂಡತಿ

24. ಕೆಂಡದ ಮಳೆ
25. ಮಿಸ್ಸರ್ ರಾಜ
26. ದೈವಶಕ್ತಿ
27. ಕಾಡಿನಬೆಂಕಿ
28. ಶಿವಯೋಗಿ ಅಕ್ಕಮಹಾದೇವಿ
29. ಒಲವಿನ ಆಸರೆ
30. ಅವಸ್ಥೆ
31. ವಿಜಯಖಡ್ಗ
32. ಜನನಾಯಕ
33. ಸಂಭವಾಮಿ ಯುಗೆ ಯುಗೆ
34. ಸಾಂಗ್ಲಿಯಾನ
35. ಪ್ರಜಾಪ್ರಭುತ್ವ
36. ಭೂಮಿ ತಾಯಾಣೆ
37. ತಾಯಿ ಕರುಳು
38. ಈ ಮಣ್ಣಿನಸತ್ಯ
39. ಬಾಳೊಂದು ಭಾವಗೀತೆ
40. ಭರತ್
41. ಉತ್ತರಭೂಪ
42. ಶಿವ ಮೆಚ್ಚಿದ ಕಣ್ಣಪ್ಪ
43. ಮಾತೃದೇವೋಭವ
44. ದೇವತ್ಗಾ ಮನುಷ್ಯ
45. ಸಾಹಸವೀರ
46. ಸುಪ್ರಭಾತ
47. ನೀ ನನ್ನ ದೈವ
48. ಶೀ ವೆಂಕಟೇಶ್ವರ ಮಹಿಮೆ
49. ತಾಯಿಗೊಬ್ಬ ಕರ್ಣ
50. ಬಿಸಿಲು ಬೆಳದಿಂಗಳು
51. ಚಿರಂಜೀವಿ ಸುಧಾಕರ್
52. ಕೃಷ್ಣ ರುಕ್ಮಿಣಿ
53. ದಾದ
54. ಶ್ರೀ ಮೈಲಾರ ಲಿಂಗ
55. ಅನಂತರ
56. ಮಾತೃ ವಾತ್ಸಲ್ಯ
57. ರಣರಂಗ
58. ಸಂಯುಕ್ತ
59. ನಂಜುಂಡಿ ಕಲ್ಯಾಣ
60. ಮಹಾದಾಸೋಹಿ ಶರಣಬಸವ

61. ನಮ್ಮೂರ ರಾಜ
62. ಇನ್ಸ್‌ಪೆಕ್ಟರ್ ವಿಕ್ರಮ್
63. ರುದ್ರ
64. ದರೋಡೆಗಳ ನಡುವೆ
65. ಮಾಧುರಿ
66. ತಾಳಿಗಾಗಿ
67. ಬಿಡಿಸದ ಬಂಧ
68. ಮಿಥಿಲೆಯ ಸೀತೆಯರು
69. ಮಹಾಯುದ್ಧ
70. ತಾಯಿಗೊಬ್ಬ ತರ್ಲೆ ಮಗ
71. ಊರಿಗೆ ಹೊಸಬ
72. ಅಂತಿಂಥ ಗಂಡು ನಾನಲ್ಲ
73. ಅದೇ ರಾಗ ಅದೇ ಹಾಡು
74. ದೇವಾ
75. ಹೃದಯ ಸಾಮ್ರಾಜ್ಯ
76. ಸಿ.ಬಿ.ಐ. ಶಂಕರ್
77. ಬಂಗಾರದ ಗೂಳಿ
78. ಪ್ರಜೆಗಳು ಪ್ರಭುಗಳು
79. ಗುಡುಗು ಸಿಡಿಲು
80. ಕಿರಾತಕ
81. ಬಾಳಹೊಂಬಾಳೆ
82. ಪರಶುರಾಮ
83. ಪ್ರೇಯಸಿ ಪ್ರೀತಿಸು
84. ಅದೃಷ್ಟ ರೇಖೆ
85. ಗಜಪತಿ ಗರ್ವಭಂಗ
86. ಕಿಂದರಜೋಗಿ
87. ನರಸಿಂಹ
88. ಮಧುಮಾಸ
89. ಎದುರು ಮನೆ ಮೀನಾ
90. ಸಂತ ಶಿಶುನಾಳ ಷರೀಫ
91. ಹೊಸ ಕಾವ್ಯ
92. ಒಂಟಿ ಸಲಗ
93. ಪ್ರೇಮಾಗ್ನಿ
94. ರಾಜಸಿಂಹ
95. ಸುರಸುಂದರಾಂಗ
96. ಡಾಕ್ಟರ್ ಕೃಷ್ಣ
97. ನಕ್ಕಳಾ ರಾಜಕುಮಾರಿ

98. ನಂಬಿದ್ರೆ ನಂಬಿ ಬಿಟ್ರೆ ಬಿಡಿ
99. ಮತ್ಸರ
100. ರಣಭೇರಿ
101. ರುದ್ರ ತಾಂಡವ
102. ಜಯಭೇರಿ
103. ಹೆಂಡ್ತಿಗೇಳ್ಬೇಡಿ
104. ನೀನೆ ನನ್ನ ದೈವ
105. ಕೆಂಪು ಗುಲಾಬಿ
106. ಎಸ್.ಪಿ. ಸಾಂಗ್ಲಿಯಾನ – 2
107. ಪ್ರಥಮ ಉಷಾಕಿರಣ
108. ಕೆಂಪು ಸೂರ್ಯ
109. ಒಂದಾಗಿ ಬಾಳು
110. ಗಿರಿಮಲ್ಲಿಗೆ
111. ಶ್ರೀ ಸತ್ಯನಾರಾಯಣ ಪೂಜಾಫಲ
112. ಪಂಚಮ ವೇದ
113. ಸ್ವರ್ಣ ಸಂಸಾರ
114. ರಾಮ ರಾಜ್ಯದಲ್ಲಿ ರಾಕ್ಷಸರು
115. ಶ್ರುತಿ ಇಲ್ಲದ ಹಾಡು
116. ಮೃತ್ಯುಂಜಯ
117. ಮೌನ ಹೋರಾಟ
118. ಆವೇಶ
119. ಪೋಲಿ ಕಿಟ್ಟಿ
120. ವರಗಳ ಬೇಟೆ
121. ತ್ರಿನೇತ್ರ
122. ಶಬರಿಮಲೈಸ್ವಾಮಿ ಅಯ್ಯಪ್ಪ
123. ಕಾಡಿನ ಹಕ್ಕಿ
124. ಅನಂತ ಪ್ರೇಮ
125. ಇವಳೆಂಥ ಹೆಂಡ್ತಿ
126. ಬಾರೇ ನನ್ನ ಮುದ್ದಿನ ರಾಣಿ
127. ಚಿಕ್ರ
128. ಹಸಿರು ಕೈಬೀಸಿ ಕರೆದಾವು
129. ಉದ್ಭವ
130. ಪ್ರಚಂಡ ಸ್ನೇಹಿತರು
131. ಕಿಲಾಡಿ ತಾತ
132. ಅಲ್ಲೆ ಇರೋದು ನೋಡಿ
133. ಛಾಲೆಂಜ್
134. ರಾಜಾ ಕೆಂಪು ರೋಜ

135. ಪ್ರತಾಪ್
136. ಯಾರು ನಾನು
137. ಭುಜಂಗಯ್ಯನ ದಶಾವತಾರ
138. ಗಣೇಶನ ಮದುವೆ
139. ಅಶೋಕ ಚಕ್ರ
140. ಕೀರ್ತಿ ತಂದ ಪುಟಾಣಿಗಳು
141. ಕ್ರಮ
142. ಹೃದಯ ಹಾಡಿತು
143. ಮನೇಲಿ ಇಲಿ ಬೀದೀಲಿ ಹುಲಿ
144. ಅಜಗಜಾಂತರ
145. ನಾದಸುರಭಿ
146. ಆಟ ಬೊಂಬಾಟ
147. ನಿಗೂಢ ರಹಸ್ಯ
148. ಭಲೇ ಚತುರ
149. ಕಾಲೇಜ್ ಹೀರೋ
150. ಅರಳಿದ ಹೂವುಗಳು
151. ಉತ್ಕರ್ಷ
152. ಪ್ರೇಮ ಪರೀಕ್ಷೆ
153. ಸೆರಗು
154. ಪುಂಡ ಪ್ರಚಂಡ
155. ಬಾಲಕ ಅಂಬೇಡ್ಕರ್
156. ಅನುಕೂಲಕ್ಕೊಬ್ಬ ಗಂಡ
157. ಇದು ಸಾಧ್ಯ
158. ಇದೇ ಪೊಲೀಸ್ ಬೆಲ್ಟ್
159. ಲಯನ್ ಜಗಪತಿರಾವ್
160. ಸುಂದರ ಕಾಂಡ
161. ಸಿ.ಬಿ.ಐ. ವಿಜಯ್
162. ರೋಲ್‌ಕಾಲ್ ರಾಮಕೃಷ್ಣ
163. ಮುತ್ತಿನ ಹಾರ
164. ಸಿ.ಬಿ.ಐ. ಶಿವ
165. ಕದನ
166. ನೀನು ನಕ್ಕರೆ ಹಾಲು ಸಕ್ಕರೆ
167. ಗರುಡಧ್ವಜ
168. ಕೆರಳಿದ ಕೇಸರಿ
169. ಕಿತ್ತೂರು ಹುಲಿ
170. ಕಾಲ ಚಕ್ರ
171. ನವತಾರೆ

172. ಮತ್ತೆ ಹಾಡಿತು ಕೋಗಿಲೆ
173. ಹೊಸ ಮನೆ ಅಳಿಯ
174. ಎಸ್.ಪಿ. ಭಾರ್ಗವಿ
175. ಗೋಲ್‌ಮಾಲ್ ಭಾಗ – 2
176. ಹತ್ಯಾಕಾಂಡ
177. ಗೌರಿ ಗಣೇಶ
178. ಗಂಡು ಸಿಡಿ ಗುಂಡು.
179. ಸಾಗರ ಸಂಗಮ
180. ಶಿವರಾಜ್
181. ಯುದ್ಧ ಪರ್ವ
182. ಕಲ್ಯಾಣ ಮಂಟಪ
183. ವೀರಪ್ಪನ್
184. ಪುಕ್ಷಟ್ಟೆ ಗಂಡ ಹೊಟ್ಟೆ ತುಂಬಾ ಉಂಡ
185. ಪುಟ್ಟ ಹೆಂಡ್ತಿ
186. ಬನ್ನಿ ಒಂದ್ಸಲ ನೋಡಿ
187. ವೀರಧೀರ
188. ಶ್ವೇತಾಗ್ನಿ
189. ನನಗೂ ಹೆಂಡ್ತಿ ಬೇಕೂ
190. ಸೆಂಟ್ರಲ್ ರೌಡಿ
191. ನಗುನಗುತಾ ನಲಿ
192. ಮಾತೃಭಾಗ್ಯ
193. ಕಲಿಯುಗ ಭೀಮ
194. ಇದುವೇ ಜೀವನ
195. ಬಾಂಬೆ ದಾದಾ
196. ಶಿವನಾಗ
197. ಪತಿತಪಾವನಿ
198. ಹಳ್ಳಿರಂಭೆ ಬೆಳ್ಳಿ ಬೊಂಬೆ
199. ನಾಗಿಣಿ
200. ಮಾಂಗಲ್ಯ
201. ಕಿಲಾಡಿ ಗಂಡು
202. ಚಿತ್ರಲೇಖ
203. ಜಗದೇಕವೀರ
204. ಬೆಳ್ಳಿ ಕಾಲುಂಗುರ
205. ಮೈಸೂರು ಮಲ್ಲಿಗೆ
206. ಮಿಡಿದ ಶೃತಿ
207. ಅಮರ ಪ್ರೇಮ
208. ಪ್ರೀತಿಯೇ ನನ್ನ ದೈವ

209. ಚೈತ್ರದ ಪ್ರೇಮಾಂಜಲಿ
210. ತೇಜ
211. ನಮ್ಮೂರ ರಾಮಾಯಣ
212. ಕ್ರಾಂತಿ ಗಾಂಧಿ
213. ಏಳುಕೋಟಿ ಮಾರ್ತಾಂಡ ಭೈರವ
214. ಸಿಡುಕಬೇಡ ಸಿಂಗಾರಿ
215. ಉಂಡುಹೋದ ಕೊಂಡು ಹೋದ
216. ರಣಚಂಡಿ
217. ಪ್ರಣಯದ ಪಕ್ಷಿಗಳು
218. ಎಂಟೆದೆ ಭಂಟ
219. ಪ್ರೇಮದ ಕಾರಂಜಿ
220. ಶಕ್ತಿಯುಕ್ತಿ
221. ಹೊಸರಾಗ
222. ಪೊಲೀಸ್ ಮತ್ತು ದಾದಾ
223. ಸಪ್ತಪದಿ
224. ಮೇಯರ್ ಪ್ರಭಾಕರ್
225. ತರ್ಕ
226. ಪೆಟ್ಟಾಯಿ ಪುರ (ತುಳು)
227. ಸತ್ಯವೊಲುಂಡು (ತುಳು)
228. ರಾತ್ರಿ ಪಗಲ್ (ತುಳು)
229. ಏಕ್ ನಗರಾಂತ್ (ಕೊಂಕಣಿ)

ಶ್ರೀ ಮಾಟಾಳ್ ನಾಗರಾಜ್:– ಈ ಕನ್ನಡ ಚಿತ್ರಗಳಿಗೆ ಸಹಾಯ ಧನ ಪಡೆಯಬೇಕಾದರೆ ಇರಬೇಕಾದಂಥ ಅರ್ಹತೆಗಳು ಏನೇನು ? ಈಗ 54 ಚಿತ್ರಗಳಿಗೆ ಸಹಾಯಧನ ಮಂಜೂರಾಗಿಲ್ಲವೆಂದು ಹೇಳಿದ್ದಾರೆ. ಅವು ಯಾವ ಯಾವ ಚಿತ್ರಗಳು ?

ಶ್ರೀ ಎಂ. ವೀರಪ್ಪ ಮೊಯಿಲಿ:– 1966ರಲ್ಲಿ ರೂಪಿಸಲಾದ ಸಹಾಯಧನ ಯೋಜನೆಯ ಆದೇಶದ ಪ್ರಕಾರ ಸಂಪೂರ್ಣವಾಗಿ ಕರ್ನಾಟಕದಲ್ಲಿ ನಿರ್ಮಾಣಗೊಂಡು ಪ್ರಾದೇಶಿಕ ಭಾಷೆಯಲ್ಲಿ ಚಿತ್ರ ಇರಬೇಕಾಗುತ್ತದೆ. ಕಪ್ಪು–ಬಿಳುಪು ಚಿತ್ರಕ್ಕೆ ಎಂದು ಮತ್ತು ಕಲಾತ್ಮಕ ಚಿತ್ರ ಎಂದು ವಿಂಗಡಿಸಲಾಗಿದೆ. 1-4-1990ರಿಂದ ಸಹಾಯ ಧನದ ಮೊತ್ತ ಕಪ್ಪು–ಬಿಳುಪು ಚಿತ್ರಗಳಿಗೆ 3 1/2 ಲಕ್ಷ ಎಂದೂ ಕಲಾತ್ಮಕ ಚಿತ್ರಗಳಿಗೆ 4 ಲಕ್ಷ ಎಂದು ಮಾಡಿದ್ದೇವೆ. ಮೊನ್ನೆತಾನೇ ನಮ್ಮ ಆಯವ್ಯಯದಲ್ಲಿ ಹೇಳಿದ ಪ್ರಕಾರ ಯಾವುದೇ ರೀತಿಯಲ್ಲಿ ರೀಮೇಕ್ ಆದ ಪಿಕ್ಚರ್‌ಗಳಿಗೆ ಈ ಸಹಾಯಧನ ಕೊಡಬಾರದೆಂದು ಮಾಡಿದ್ದೇವೆ. ಕಲಾತ್ಮಕ ಚಿತ್ರಗಳಿಗೆ ಜಾಸ್ತಿ ಮಾಡಿದ್ದೇವೆ. ನಮ್ಮಲ್ಲಿ ಸೃಜಾನಾತ್ಮಕ ಚಿತ್ರಗಳು ನಮ್ಮ ಕರ್ನಾಟಕದಲ್ಲಿ ಬರತಕ್ಕ ಉದ್ದೇಶದಿಂದ ಈ ಸೌಲಭ್ಯವನ್ನು ನಾವು ಒದಗಿಸಿದ್ದೇವೆ. 1992-93ರಲ್ಲಿ 83 ಚಿತ್ರಗಳಿಗೆ ಈ ಸಹಾಯಧನ ಸಿಗುತ್ತದೆ. 92-93ರಲ್ಲಿ 54 ಚಿತ್ರಗಳಿಗೆ ನಾವು ಸಹಾಯಧನ ಕೊಟ್ಟಿದ್ದೇವೆ. ಆ ವಿವರವನ್ನು ಈಗಾಗಲೇ ತಮಗೆ ಕೊಡಲಾಗಿದೆ. 92-93ರಲ್ಲಿ ಮಾಡಿದಂಥ ಇನ್ನೂ ಸುಮಾರು 54 ಚಿತ್ರಗಳಿಗೆ ಸಬ್ಸಿಡಿ ಕೊಡಬೇಕಾಗುತ್ತದೆ.

ಶ್ರೀ ಮಾಟಾಳ್ ನಾಗರಾಜ್:– ಈ ರೀಮೇಕ್ ಚಿತ್ರಗಳು ಅನ್ನತಕ್ಕ ಮಾದ ಇದೆಯಲ್ಲಾ ಇದು

ತಮಗೆ ಅರ್ಥವಾಗುತ್ತದೆ. ತಮಿಳ್ನಾಡಾಗಲಿ, ಬೇರೆ ರಾಜ್ಯಗಳಲ್ಲಾಗಲಿ ಬೇರೆಬೇರೆ ಭಾಷೆಯ ಚಿತ್ರಗಳನ್ನು ಏನು ತೆಗೆಯುತ್ತಿದ್ದಾರೆ. ಅವರು ಯಥಾವತ್ತಾದ ಆ ಚಿತ್ರದ ಕಥೆಯನ್ನು ತಂದು ಬೇರೆ ರೀತಿಯಲ್ಲಿ ತೆಗೆಯುತ್ತಾರೆ. ಕನ್ನಡ ಸಂಸ್ಕೃತಿ, ಕನ್ನಡ ಸಾಹಿತ್ಯ ಇಲ್ಲದಿರುವ ಚಿತ್ರಗಳನ್ನು ಇವತ್ತು ನಾವು ಕಾಣುತ್ತಿದ್ದೇವೆ. ಸುಮಾರು 90 ಪರ್ಸೆಂಟ್ ಚಿತ್ರಗಳಿಗೆ ಕನ್ನಡ ಸಂಸ್ಕೃತಿ ಇಲ್ಲ, ಕನ್ನಡ ಸಾಹಿತ್ಯ ಇಲ್ಲ. ಕನ್ನಡದ ಹಿನ್ನಲೆ ಇಲ್ಲ. ಇಂಥ ಚಿತ್ರಗಳನ್ನು ತೆಗೆಯತಕ್ಕ ಪರಿಸ್ಥಿತಿ ಬಂದಿದೆ. ವೀರಪ್ಪನ್ ಎಂಬ ಚಿತ್ರಕ್ಕೆ ಹಣ ಬಿಡುಗಡೆಯಾಗಿದೆ. ಈ ವೀರಪ್ಪನ್ ಚಿತ್ರಕ್ಕೆ ಯಾವ ಕನ್ನಡ ಸಾಹಿತ್ಯ ಇದೆ, ಯಾವ ಸಂಸ್ಕೃತಿ ಇದೆ ? ವೀರಪ್ಪನ್ ಚಿತ್ರಕ್ಕೆ ಹಣ ಕೊಡುವುದಕ್ಕೆ ಏನು ಮಾಡಿದ್ದೀರಿ ? ಸಹಾಯಧನ ಕೊಡತಕ್ಕದ್ದು ಕನ್ನಡ ಸಂಸ್ಕೃತಿ, ಕನ್ನಡ ಸಾಹಿತ್ಯ, ಇರತಕ್ಕ ಚಿತ್ರಗಳಿಗೆ. ಕನ್ನಡ ಸಾಹಿತಿಗಳೇ ಕಥೆಗಳನ್ನು, ಗೀತೆಗಳನ್ನು ಕೊಡಬೇಕೆಂಬುದು ತಮ್ಮ ಉದ್ದೇಶ. ಕಲಾತ್ಮಕ ಚಿತ್ರಗಳು ಎಂದು ಹೇಳಿದ್ದೀರಿ. ಎಷ್ಟು ಚಿತ್ರಗಳಲ್ಲಿ ಎಷ್ಟು ಕಲಾತ್ಮಕವಾದ ಚಿತ್ರಗಳಿವೆ ? ಇಂಥ ಪರಿಸ್ಥಿತಿ ಉದ್ಭವವಾಗದಂತೆ ಇನ್ನು ಮುಂದೆ ಕಟ್ಟುನಿಟ್ಟಾಗಿ ಕನ್ನಡ ಸಾಹಿತ್ಯ, ಕನ್ನಡ ಸಂಸ್ಕೃತಿ ಇರತಕ್ಕ ಕನ್ನಡ ಚಿತ್ರಗಳಿಗೆ, ಕನ್ನಡ ಸಾಹಿತಿಗಳು ಬರೆದಂಥ ಚಿತ್ರ ಕಥೆಯುಳ್ಳ ಚಿತ್ರಗಳಿಗೆ ಮಾತ್ರ ಸಹಾಯಧನ ಕೊಡುತ್ತೇವೆಂದು ಸರ್ಕಾರ ಕಡ್ಡಾಯ ಮಾಡುವುದಕ್ಕೆ ಸಾಧ್ಯವೇ ?

ಶ್ರೀ ಎಂ. ವೀರಪ್ಪ ಮೊಯಿಲಿ:– ತಾವು ಹೇಳಿದಂತ ಉದ್ದೇಶ ಒಳ್ಳೆಯದಿದೆ. ಸೃಜನಾತ್ಮಕ ಚಿತ್ರಗಳು ಬರಬೇಕು, ಕಲಾತ್ಮಕ ಚಿತ್ರಗಳು ಬರಬೇಕು. ಕನ್ನಡ ಕಲೆ ಸಂಸ್ಕೃತಿಯನ್ನು ಹೆಚ್ಚಿಸತಕ್ಕ ಚಿತ್ರಗಳು ಬರಬೇಕೆಂಬ ಉದ್ದೇಶದಿಂದ ಸಹಾಯಧನ ಕೊಟ್ಟಿದ್ದೇವೆ. ನಮ್ಮ ಕನ್ನಡ ಚಲನಚಿತ್ರ ಕ್ಷೇತ್ರ ಸಧಪನ್ನವಾಗಿ ಬೆಳೆಯಬೇಕೆಂಬ ಉದ್ದೇಶದಿಂದ ಮಾಡುತ್ತಿದ್ದೇವೆ. ಅನೇಕ ಬಾರಿ ತಾವು ಹೇಳಿದಂಥ ಅಭಿಪ್ರಾಯಕ್ಕೆ ನಾವು ಸ್ಪಂದಿಸಬೇಕಾಗುತ್ತದೆ. ಅನೇಕ ಬಾರಿ ನಾವು ಸಹಾಯಧನ ಕೊಟ್ಟಿದ್ದೇವೆ. ಈ ಸ್ಕೀಂ ಕೊಡುವ ಮೊದಲು ಕನ್ನಡ ಸಂಸ್ಕೃತಿಯ ಬಗ್ಗೆ , ಕನ್ನಡ ಸಾಹಿತ್ಯದ ಬಗ್ಗೆ ಒಳ್ಳೆಯ ಸೃಜನಾತ್ಮಕ ಪಿಕ್ಚರ್‌ಗಳು ಬರುತ್ತವೆ ಎಂಬ ಉದ್ದೇಶದಿಂದ ಕೊಟ್ಟೆವು. ಆದರೆ ಇತ್ತೀಚೆಗೆ ಏನೂ ಮಾಡಿದರೂ ಮಸಾಲೆ ಪಿಕ್ಚರ್‌ಗಳು ಬರುತ್ತಿವೆ. ಅವಕ್ಕೆ ಸಹಾಯಧನ ಕೊಡಬೇಕಾಗಿದೆ. ಯಾಂತ್ರಿಕವಾಗಿ ಸ್ಕ್ರುಟಿನೈಸ್ ಮಾಡಿಕೊಂಡು ಸಹಾಯಧನ ಪಡೆಯಬೇಕೆಂಬ ಪ್ರವೃತ್ತಿ ಈಗ ಬಂದಿದೆ. ರೀಮೇಕ್ ಮಾಡತಕ್ಕದ್ದಕ್ಕೆ ಖಂಡಿತ ಕೊಡುವುದಿಲ್ಲವೆಂದು ಹೇಳಿದ್ದೇವೆ. ಆದನ್ನು ಕಟ್ಟುನಿಟ್ಟಾಗಿ ಅನುಷ್ಠಾನ ಮಾಡುತ್ತೇವೆ. ಇನ್ನೊಂದು ವಿಚಾರ ಮಾಡುತ್ತಿದ್ದೇವೆ, ಏನೆಂದರೆ ರೈಟರ್ಸ್ ಯಾರಿದ್ದಾರೆ ಅವರಿಂದ ಸರ್ಟಿಫಿಕೇಟ್ ತೆಗೆದು ಆ ಸರ್ಟಿಫಿಕೇಟ್ ಕೊಟ್ಟಮೇಲೆ ಸಬ್ಸಿಡಿ ರಿಲೀಸ್ ಮಾಡಬೇಕೆಂಬ ಆಲೋಚನೆ ಇದೆ. ಇದರ ಬಗ್ಗೆ ನಾವು ಗುಣಾತ್ಮಕವಾಗಿ ಮೌಲ್ಯಮಾಪನ ಇವತ್ತು ಮಾಡಬೇಕಾಗಿದೆ. ಯಾಂತ್ರಿಕವಾಗಿ ಸಬ್ಸಿಡಿ ಕೊಡತಕ್ಕದ್ದು ಏನು ಬಂದಿದೆ ಇದು ಏನು ನಿರೀಕ್ಷಿಸಿದ. ಯೋಜಿತವಾದ ಗುರಿಯನ್ನು ಮುಟ್ಟುವುದಕ್ಕೆ ಸಮರ್ಥವಾಗಿಲ್ಲ ಎಂಬುದನ್ನು ಒಪ್ಪುತ್ತೇನೆ. ಸೃಜನಾತ್ಮಕ ನಿರ್ದೇಶಕರನ್ನು ಕರೆಯಿಸಿ, ಫಿಲ್ಮ್ ಪ್ರೊಡ್ಯೂಸರ್ಸ್ ಕರೆಯಿಸಿ ನೈಜವಾದ ನಮ್ಮ ಗುಣಾತ್ಮಕವಾದ ನಮ್ಮ ಸಂಸ್ಕೃತಿಯನ್ನು ಹೆಚ್ಚು ಮಾಡತಕ್ಕ ರೀತಿಯಲ್ಲಿ ಫಿಲ್ಮ್ ಇಂಡಸ್ಟ್ರೀ ಬೆಳೆಯುವುದಕ್ಕೆ ಪ್ರತ್ಯೇಕವಾಗಿ ಸಭೆ ಕರೆದು, ತಮ್ಮನ್ನೂ ಕೂಡ ಪ್ರತ್ಯೇಕವಾಗಿ ಕರೆದು ಎಲ್ಲಾ ವಿಚಾರ ಮಾಡಿ ಇದರ ಬಗ್ಗೆ ಹೊಸ ಗುಣಾತ್ಮಕವಾದ ಮಾಪನವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, 'ತರ್ಲೆನನ್ಮಗ' ಎಂದು ಒಂದು ಚಿತ್ರ; ಇಂತಹದ್ದು ನೂರಾರು ಹೆಸರುಗಳ ಪಟ್ಟಿ ನನ್ನ ಹತ್ತಿರ ಇದೆ. ಇಂತಹ ಚಿತ್ರಗಳು ಬರುವುದಾದರೆ, ಕನ್ನಡ ಸಂಸ್ಕೃತಿ ಏನು ಅಧ್ಯಕ್ಷರೇ ? ಇದನ್ನು ನಿಲ್ಲಿಸಬೇಕಾದರೆ ಕನ್ನಡ ಸಾಹಿತಿಗಳದ್ದೇ ಒಂದು ಮಂಡಲಿ ಮಾಡಿ, ಆ ಮಂಡಲಿ ಯಾವ ಚಿತ್ರ ಬರುತ್ತದೆಯೋ ಅದು ಒಳ್ಳೆಯ ಚಿತ್ರ ಎಂದು ಅರ್ಹತಾ ಪತ್ರ ಕೊಟ್ಟಾಗ ಮಾತ್ರ ಸಹಾಯ ಮಾಡಬೇಕು. 'ಗುಂಡು ಸಿಡಿಗುಂಡು' ಏನು ಅಧ್ಯಕ್ಷರೇ ? ಇನ್ನು ಸೆನ್ಸಾರ್

ಮಂಡಳಿ ಇದೆ. ಅಧ್ಯಕ್ಷರೇ ಈ ನಿರ್ಮಾಪಕರು ಹಣ ಕೊಟ್ಟು ಯಾವುದಕ್ಕೆ ಬೇಕಾದರೂ ಸರ್ಟಿಫಿಕೇಟ್ ಪಡೆಯುತ್ತಾರೆ. ರದ್ದು ಮಾಡಬೇಕು. ಹೆಸರಿಗೆ ಮಾತ್ರ ಸೆನ್ಸಾರ್ ಮಂಡಲಿ. ಇದನ್ನು ರದ್ದು ಮಾಡಬೇಕು. ಹಣ ಪಡೆದು ಯಾವುದೇ ಎಂತಹ ಚಿತ್ರಕ್ಕಾದರೂ ಸರ್ಟಿಫಿಕೇಟ್ ಕೊಡುತ್ತಾರೆ. ''ರೌಡಿ ಎಂ.ಎಲ್.ಎ''. ಇಂತಹ ಚಿತ್ರಗಳು ಅಧ್ಯಕ್ಷರೇ, ಈ ಕನ್ನಡ ಚಲನಚಿತ್ರ ರಂಗ ಬೆಳೆಯಬೇಕೆಂದು ಹಗಲಿರುಳು ಹೋರಾಟ ಮಾಡಿದವನು ನಾನು.

ಶ್ರೀ ಬಸವರಾಜ ರಾಯರೆಡ್ಡಿ:– ತೆಲುಗಿನಲ್ಲಿ ಮುಖ್ಯಮಂತ್ರಿ ಮೇಲೆ ಚಿತ್ರ ತೆಗೆದಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:– ''ನನಗೂ ಹೆಂಡ್ತಿ ಬೇಕು'' ಇದೂ ಒಂದು ಚಿತ್ರ. ಇಂತಹದ್ದು ನಮ್ಮ ಕನ್ನಡ ಸಂಸ್ಕೃತಿಗೆ ಮಾರಕ. ಮಾನ್ಯ ಅಧ್ಯಕ್ಷರೇ, ಕನ್ನಡ ಚಿತ್ರಜಗತ್ತಿನಲ್ಲಿ ಎಂತೆಂಥ ಮೇಧಾವಿಗಳು, ಚಿತ್ರ ಸಾಹಿತಿಗಳು, ಗೀತಕಾರರು, ಉತ್ತಮ ನಟರು ಇದ್ದಾರೆ. ಇದನ್ನೆಲ್ಲಾ ಗಾಳಿಗೆ ತೂರಿ ಅನೇಕ ಚಿತ್ರ ಸಾಹಿತಿಗಳನ್ನು ಮೂಲೆಗುಂಪು ಮಾಡಿದ್ದಾರೆ. ಈ ರಂಗವನ್ನು ಪರಿಪೂರ್ಣ ಪರಿಣಾಮಕಾರಿ ಮಾಡಬೇಕಾದರೆ, ಶಕ್ತಿಯುತ, ಚೈತನ್ಯಪೂರ್ಣವಾದ ಕಾಯಕಲ್ಪ ಮಾಡಬೇಕಾದರೆ ಹೊಸ ನೀತಿ ನಿರೂಪಣೆ ಮಾಡುವುದಾದರೆ ಅನೇಕ ಸಲಹೆಗಳನ್ನು ಕೊಡುವುದಕ್ಕೆ ಸಿದ್ಧನಿದ್ದೇನೆ. ದಯಮಾಡಿ ತೆಗೆದುಕೊಳ್ಳಬೇಕೆಂದು ನಾನು ಕಳಕಳಿಯಿಂದ ಮನವಿ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಒಳ್ಳೆಯ ಸೂಚನೆ ಕೊಟ್ಟಿದ್ದಾರೆ. ನನ್ನ ಆಲೋಚನೆ ಕೂಡ ಆ ದಾರಿಯಲ್ಲೇ ಇರುವಾಗ ಅದಕ್ಕೆ ಪೂರಕವಾಗಿ ಸಲಹೆ ಕೊಟ್ಟಿದ್ದಾರೆ. ತಮ್ಮನ್ನು ಕರೆಯಿಸಿ ಮಾತನಾಡುತ್ತೇನೆ. ಮತ್ತೆ ಕನ್ನಡ ಚಿತ್ರ ಜಗತ್ತಿನ ಸಾಹಿತಿಗಳನ್ನು, ಹಿರಿಯರನ್ನು ಕರೆದು ಆಲೋಚನೆ ಮಾಡಿ ಹೊಸ ನೀತಿಯನ್ನು ಪ್ರಕಟ ಮಾಡುತ್ತೇನೆ.

ಶ್ರೀ ಆರ್. ದಯಾನಂದ ರಾವ್:– ಅಧ್ಯಕ್ಷರೇ, ಈ ನಾಡಿನ ಕನ್ನಡ ಚಿತ್ರರಂಗದಲ್ಲಿ ಅಶ್ಲೀಲ ಚಿತ್ರಗಳು ಬರುತ್ತಿವೆ. ಇದರ ಪರಿಣಾಮವಾಗಿ ಬೆಂಗಳೂರು ನಗರದಲ್ಲಿ ಏನು ಕಾಲೇಜಿನಲ್ಲಿ ಓದುತ್ತಿರುವ ಯುವಕ ಯುವತಿಯರು ಇದ್ದಾರೆ ಅವರ ಮೇಲೆ ಇದರ ಒಂದು ಪರಿಣಾಮ ಬೀಳುತ್ತದೆ. ಮತ್ತೆ ಇಂತಹ ಚಿತ್ರಗಳಿಗೆ ಸಬ್ಸಿಡಿ ಕೂಡಾ ಸರ್ಕಾರದಿಂದ ಕೊಡಲಾಗುತ್ತಿದೆ. ಇದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಂಡು ಇಂತಹದಕ್ಕೆ ಸಬ್ಸಿಡಿಯನ್ನು ಕೊಡುವುದನ್ನು ನಿಲ್ಲಿಸಬೇಕು. ಇಂತಹ ಚಿತ್ರಗಳನ್ನು ತೆಗೆಯುವುದರಿಂದ ಕನ್ನಡ ಚಿತ್ರರಂಗಕ್ಕೇ ದೊಡ್ಡ ಧಕ್ಕೆಯಾಗುತ್ತದೆ. ಇದನ್ನು ಸರ್ಕಾರ ಯಾವುದೇ ರೀತಿಯಲ್ಲಿ ನಿಲ್ಲಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ದಯಾನಂದ ರಾವ್ ಹೇಳಿದ ಪ್ರಕಾರವೇ ಮಾನ್ಯ ನಾಗರಾಜ್ ಅವರೂ ಅದೇ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ನಾವು ಬಹುಶಃ ಆರೋಗ್ಯಕರವಾದ ವಾತಾವರಣ ಮತ್ತು ಸುಸಂಸ್ಕೃತವಾದ ವಾತಾವರಣವನ್ನು ಚಲನಚಿತ್ರ ಕ್ಷೇತ್ರದಲ್ಲಿ ಬೆಳೆಸುವಾಗ ಮನೋರಂಜನೆ ಇರಬೇಕಾಗುತ್ತದೆ. ಆದರೆ ಈ ಮನೋರಂಜನೆಯ ಹೆಸರಿನಲ್ಲಿ ಬೀಭತ್ಸವಾದಂಥ ಮತ್ತು ನಮ್ಮ ಸಮಾಜದ ಒಂದು ಸಂಸ್ಕೃತಿಗೆ ಸಂಪೂರ್ಣವಾಗಿ ವಿರುದ್ಧವಾದ ದಿಕ್ಕಿನಲ್ಲಿ ಜನರನ್ನು ಕೊಂಡು ಹೋಗತಕ್ಕ ಚಿತ್ರಗಳಿಗೆ ಸಹಾಯಧನ ಕೊಟ್ಟು ಪ್ರೋತ್ಸಾಹ ಕೊಡುವುದು ಬೇಕಾಗಿಲ್ಲ. ಅಂದರೆ ಸೆನ್ಸಾರ್ ಮಂಡಲಿಯಲ್ಲಿ ರಾಜ್ಯದ ಪ್ರತಿನಿಧಿಗಳು ಇರುವುದಿಲ್ಲ. ಅಂದರೆ ರಾಜ್ಯ ಸರ್ಕಾರದ ಪ್ರತಿನಿಧಿಗಳು ಇರುವುದಿಲ್ಲ. ಆದರೂ ಕೂಡ ಸೆನ್ಸಾರ್ ಮಂಡಲಿ ಬಗ್ಗೆ ಕೇಂದ್ರ ಸರ್ಕಾರಕ್ಕೆ ಕೆಲವು ಸಲಹೆಗಳನ್ನು ನಾವು ರಾಜ್ಯ ಸರ್ಕಾರದಿಂದ ಕೊಟ್ಟು ಇದರ ಬಗ್ಗೆ ಕನ್ನಡ ಚಲನಚಿತ್ರ ಜಗತ್ತಿನಲ್ಲಿ ಹೊಸ ಶಕೆ ಬರುವ ಹಾಗೆ ನಾವು ಪ್ರಯತ್ನ ಮಾಡುತ್ತೇವೆ.